UASB LIBRARY
Newspaper Clippings
Pg .1 Friday 02-07-2021 Jai Kisan



ಇಂದು ಎಲ್ಲಾ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಕಾರ್ಯಕ್ರಮ ಚಾಲನೆ

ಹಳ್ಳಿಗಳಲ್ಲಿ ಸಸ್ಯೋತ್ಸವ

• ದಿಗಂತ ವರದಿ, ಬೆಂಗಳೂರು

ನಾಡಿನ ಹಸಿರ ಸಿರಿ ವೃದ್ಧಿಸಲು ಮುಂದಾಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಜು.2ರಿಂದ ಒಂದು ವಾರ ರಾಜ್ಯಾದ್ಯಂತ ವನ ಮಹೋತ್ಸವ ಜಾಗೃತಿ ಕಾರ್ಯಕ್ರಮ ಆಚರಿಸಲು ನಿರ್ಧರಿಸಿದೆ.

ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ಏಕಕಾಲಕ್ಕೆ 6020 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸಸಿ ನೆಡುವ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ದೊರೆಯಲಿದೆ. ಮುಂದಿನ ದಿನಗಳಲ್ಲಿ ಆಯಾ ಗ್ರಾಪಂ ವ್ಯಾಪ್ತಿಯ ಹಳ್ಳಿಗಳಲ್ಲಿ ವನಮಹೋತ್ಸವ ಕಾರ್ಯಕ್ರಮವು ವ್ಯಾಪಕವಾಗಿ ನಡೆಯಲಿದೆ. ಇದು ಗ್ರಾಮೀಣ ಕರ್ನಾಟಕವನ್ನು ಹಸಿರುಗೊಳಿಸುವ ದಿಟ್ಟ ಹೆಜ್ಜೆಯಾಗಿದೆ.



ಪ್ರಧಾನಿ ಮೋದಿ ಅವರ ಕರೆಯಂತೆ ಹಸಿರು ಹೆಚ್ಚಿಸಲು ಸೇವಾ ಹೀ ಸಂಘಟನ್‌ನಂತಹ ಕ್ರಮ ಕೈಗೊಂಡಿರುವ ಬಿಜೆಪಿ ಒಂದೆಡೆಯಾದರೆ, ಇದಕ್ಕೆ ಪೂರಕವಾಗಿ ಸರ್ಕಾರದ ವತಿಯಿಂದಲೂ ವನ ಮಹೋತ್ಸವ ಆಚರಣೆ ನಡೆಯಲಿದೆ. ಶುಕ್ರವಾರದಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹಾಗೂ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅತೀಕ್ ಅವರು ರಾಜ್ಯಾದ್ಯಂತ ಏಕಕಾಲದಲ್ಲಿ ವನ ಮಹೋತ್ಸವ ಆಚರಣೆಗೆ ಚಾಲನೆ ನೀಡಲಿದ್ದು, ಜು.7ರ ವರೆಗೆ ನಾಡಿನಾದ್ಯಂತ ಗಿಡ ನೆಟ್ಟು ಪರಿಸರ ಜಾಗೃತಿ ಮೂಡಿಸಲಾಗುತ್ತದೆ.

ಸಾರ್ವಜನಿಕ ಸಹಕಾರದೊಂದಿಗೆ ಅಭಿಯಾನ: ಗುರುವಾರ ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ಈ ಕುರಿತು ವಿವರಣೆ ನೀಡಿದ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ, ಕರ್ನಾಟಕ ರಾಜ್ಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ಕಾರ್ಕಳದ ಜಾಗೃತಿ ಫೌಂಡೇಶನ್ ಸಹಯೋಗದೊಂದಿಗೆ ಈ ಕಾರ್ಯಕ್ರಮ ಅನುಷ್ಠಾನಗೊಳ್ಳಲಿದೆ. ಪಂಚಾಯತಿ ಅಧಿಕಾರಿ, ನೌಕರರು, ಸಿಬ್ಬಂದಿ, ಚುನಾಯಿತ ಸದಸ್ಯರು ಸಾರ್ವಜನಿಕರನ್ನು ಒಟ್ಟುಗೂಡಿಸಿ ಸ್ಥಳೀಯರಲ್ಲಿ ಪರಿಸರ ಜಾಗೃತಿ ಮೂಡಿಸಲಾಗುತ್ತದೆ ಎಂದರು.



- ಜು.2ರಿಂದ ಜು.7ರವರೆಗೆ ವನಮಹೋತ್ಸವ ಆಚರಣೆ
- 6009 ಗ್ರಾಪಂ ವ್ಯಾಪ್ತಿಯಲ್ಲಿ ಗಿಡ ನೆಟ್ಟು ಜಾಗೃತಿ ಕಾರ್ಯಕ್ರಮ
- ಗ್ರಾಪಂ ಅಧಿಕಾರಿ, ಸಿಬ್ಬಂದಿಯಿಂದ ತಲಾ 2 ಗಿಡ ನೆಡಲು ಗುರಿ

ಹೀಗಿರಲಿ ಸಸಿ ನೆಡುವ ಸ್ಥಳ

- ರಸ್ತೆ ಅಗಲೀಕರಣ, ಸರ್ಕಾರಿ ಜಮೀನು ಮತ್ತು ಇತರ ಉದ್ದೇಶಕ್ಕೆ ಭೂಸ್ವಾಧೀನ ಆಗುವಂತಹ ಪ್ರದೇಶ ಬಿಟ್ಟು ಸಸಿ ನೆಡಬೇಕು.
- ಪ್ರಾಣಿ, ಪಕ್ಷಿ, ಸಾರ್ವಜನಿಕರಿಗೆ ಉಪಯೋಗ ಆಗುವಂತಹ ಪ್ರದೇಶದ ಆಯ್ಕೆ ಸೂಕ್ತ.
- ಧಾರ್ಮಿಕ ಕ್ಷೇತ್ರಗಳ ಆವರಣ, ಉದ್ಯಾನ, ಅರಣ್ಯ ಇಲಾಖೆ ಜಾಗ, ಸಾಮಾಜಿಕ ಅರಣ್ಯ, ಸರ್ಕಾರಿ ಸ್ಥಳ, ಸಂಘ-ಸಂಸ್ಥೆಗಳಿಗೆ ಮೀಸಲಿಟ್ಟ ಪ್ರದೇಶ, ರಸ್ತೆಯ ಇಕ್ಕೆಲ, ಸರ್ಕಾರಿ ಶಾಲೆ-ಕಾಲೇಜಿನಂತಹ ಪ್ರದೇಶಗಳಲ್ಲಿ ಸಸಿ ನೆಟ್ಟು ಬೆಳೆಸಿ.

ಅಭಿಯಾನದಲ್ಲಿ ಪಾಲ್ಗೊಳ್ಳಿ, ಬಹುಮಾನ ಗೆಲ್ಲಿ

ಗ್ರಾಮ ಪಂಚಾಯತಿಯ ಎಲ್ಲ ಸಿಬ್ಬಂದಿಯೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು. ಸಾರ್ವಜನಿಕರನ್ನು ಭಾಗಿಯಾಗುವಂತೆ ಮಾಡಬೇಕು. ಗಿಡ ನೆಡುವ ಚಿತ್ರಗಳನ್ನು ಸೆರೆ ಹಿಡಿದು https://cutt.ly/5molARA ಅಲ್ಲಿ ಅಪ್‌ಲೋಡ್ ಮಾಡಬೇಕು. ಆಯೋಜಕರು ಪರಿಶೀಲಿಸಿ ವಿಜೇತರನ್ನು ಆಯ್ಕೆ ಮಾಡುತ್ತಾರೆ. ಒಂದು ಗ್ರಾಪಂನಲ್ಲಿ ಪಿಡಿಒ, ಕಾರ್ಯದರ್ಶಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಮತ್ತು ಗ್ರಾಪಂ ಸಿಬ್ಬಂದಿಯ ಒಟ್ಟಾರೆಯಾಗಿ 10 ಜನ ಇಪ್ಪತ್ತು ಗಿಡ ನೆಡಬೇಕು, 12 ಜನರಿದ್ದರೆ 24 ಗಿಡಗಳನ್ನು ನೆಡಬೇಕು.

02-07-2021 Hd Pg 01

For more information visit
University Library Website
Web - uasbagrilibindia.org
E-mail- librarian@uasbangalore.edu.in